

# ತೆರೆಯ ಮೇಲೆ ಡೊಳ್ಳಿನ ಸದ್ದು

ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು, ರಾಷ್ಟ್ರಪ್ರಶಸ್ತಿಯನ್ನೂ ಪಡೆದ ಸಾಗರ್ ಪುರಾಣಿಕ್ ನಿರ್ದೇಶನದ 'ಡೊಳ್ಳು' ಸಿನಿಮಾ ತೆರೆಯ ಮೇಲೆ ಬರಲು ಸಜ್ಜಾಗಿದೆ. ನಿರ್ದೇಶಕ ಪವನ್ ಒಡೆಯರ್ ನಿರ್ಮಾಣದ ಮೊದಲ ಸಿನಿಮಾ ಇದು. ಆ. 26ರಂದು ಈ ಚಿತ್ರವನ್ನು ಚಿತ್ರಮಂದಿರಗಳಲ್ಲಿ ಬಿಡುಗಡೆಗೊಳಿಸಲು ಚಿತ್ರತಂಡ ಸಿದ್ಧತೆ ನಡೆಸಿದೆ. ಪ್ರಚಾರದ ಹೆಜ್ಜೆಯಾಗಿ ಚಿತ್ರದ ಹಾಡೊಂದನ್ನು ಇತ್ತೀಚೆಗಷ್ಟೇ ಡಾಲಿ ಧನಂಜಯ್ ಬಿಡುಗಡೆ ಮಾಡಿದ್ದಾರೆ. 'ಮಾಯಾನಗರಿ...' ಎಂಬ ಈ ಹಾಡು ಹಳ್ಳಿಯಿಂದ ಬಂದ ಯುವಕನ ಕಣ್ಣಲ್ಲಿ ತೆರೆದುಕೊಳ್ಳುವ ಮಹಾನಗರದ ಚಹರೆಗಳನ್ನು ಕಟ್ಟಿಕೊಡುತ್ತದೆ. ಈ ಹಾಡನ್ನು ಕೇಳಿದಾಗ ಧನಂಜಯ್ ಅವರಿಗೆ ತಾವು ಹಳ್ಳಿಯಿಂದ ಕೆಲಸವನ್ನು ಅರಸಿ ಬೆಂಗಳೂರಿಗೆ ಬಂದ ದಿನಗಳ ನೆನಪು ಮನಸಲ್ಲಿ ಹಾದುಹೋಯಿತಂತೆ. ಪ್ರದ್ಯುಮ್ನ ನರಹಳ್ಳಿ ಬರೆದಿರುವ ಈ ಹಾಡಿನ ಸಾಹಿತ್ಯಕ್ಕೆ ಅನಂತ್ ಕಾಮನ್ ಸಂಗೀತ ಸಂಯೋಜನೆ ಮಾಡಿದ್ದಾರೆ. ನಿರ್ದೇಶಕ ಸಾಗರ್ ಪುರಾಣಿಕ್ ಅವರೇ ಹಾಡಿದ್ದಾರೆ.

ಡೊಳ್ಳು ಕುಣಿತದ ಜನಪದ ಕಲೆಯ ಸುತ್ತಲೇ ಈ ಚಿತ್ರದ ಕಥೆಯನ್ನು ಹೆಣೆಯಲಾಗಿದೆಯಂತೆ. ಕಾರ್ತಿಕ್ ಮಹೇಶ್ ನಾಯಕನಾಗಿ ನಟಿಸಿರುವ ಈ ಸಿನಿಮಾಗೆ ನಿಧಿ ಹೆಗಡೆ ನಾಯಕಿ. ಅಭಿಲಾಷ್ ಕಲಾಥಿ ಛಾಯಾಗ್ರಹಣ ಮಾಡಿದ್ದಾರೆ. ಶ್ರೀನಿಧಿ ಡಿ.ಎಸ್. ಅವರು ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ■



# ಕೌಟಿಲ್ಯನ ಸಿನಿಕಥೆ!



ಅರ್ಥಶಾಸ್ತ್ರಜ್ಞ ಕೌಟಿಲ್ಯ ಯಾರಿಗೆ ಗೊತ್ತಿಲ್ಲ? ಅವನ ಹೆಸರಿನಲ್ಲಿಯೇ ಕನ್ನಡ ಚಿತ್ರವೊಂದು ನಿರ್ಮಾಣಗೊಂಡಿದ್ದು ಆ. 26ಕ್ಕೆ ಬಿಡುಗಡೆಯಾಗಲೂ ಸಜ್ಜುಗೊಂಡಿದೆ.

'ಕೌಟಿಲ್ಯ' ಎಂಬ ಶೀರ್ಷಿಕೆ ನೋಡಿ ಇದು ಪೌರಾಣಿಕ ಸಿನಿಮಾ ಇರಬಹುದು ಎಂದು ಊಹಿಸಿಕೊಳ್ಳಬೇಡಿ. ಇದು ಈ ಕಾಲದ್ದೇ ಕಥೆ. ಅರ್ಥಶಾಸ್ತ್ರದ ಒಂದು ಎಳೆಯನ್ನು ಇಟ್ಟುಕೊಂಡು ಈ ಸಿನಿಮಾವನ್ನು ಮಾಡಲಾಗಿದೆಯಂತೆ. ಹಾಗಾಗಿಯೇ ಈ ಸಿನಿಮಾಕ್ಕೆ 'ಕೌಟಿಲ್ಯ' ಎಂದು ಹೆಸರಿಡಲಾಗಿದೆ. ಪ್ರಭಾಕರ್ ಶೇರಖಾನೆ ಈ ಸಿನಿಮಾದ ನಿರ್ದೇಶಕರು.

ಇತ್ತೀಚೆಗಷ್ಟೇ 'ಕೌಟಿಲ್ಯ' ಸಿನಿಮಾದ ಟ್ರೇಲರ್ ಬಿಡುಗಡೆಯಾಗಿ ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ಸದ್ದನ್ನೂ ಮಾಡಿದೆ. 'ಶನಿ', 'ಮಹಾಕಾಳಿ' ಧಾರಾವಾಹಿಗಳಲ್ಲಿ ನಟಿಸಿದ್ದ, 'ಜಂಟಲ್ ಮನ್' ಸಿನಿಮಾದಲ್ಲಿ ಗಮನಸೆಳೆದಿದ್ದ ಅರ್ಜುನ್ ರಮೇಶ್ ಈ ಸಿನಿಮಾದ ನಾಯಕ. ಪ್ರಸ್ತುತ ಅವರು ಬಿಗ್‌ಬಾಸ್ ರಿಯಾಲಿಟಿ ಶೋದ ಸ್ಪರ್ಧಿಯಾಗಿದ್ದಾರೆ. ಈ ಅಂಶ ಕೂಡ ಸಿನಿಮಾ ಪ್ರಚಾರಕ್ಕೆ ಸಹಾಯಕವಾಗಬಹುದು ಎಂದು ಚಿತ್ರತಂಡ ಯೋಚಿಸಿದಂತಿದೆ.

ಟೀವಿ ಧಾರಾವಾಹಿಗಳಲ್ಲಿ ನಟಿಸುತ್ತಿದ್ದ ಪ್ರಿಯಾಂಕಾ ಚಿಂಚೋಳಿ ಈ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ನೀನಾಸಂ ಅಶ್ವತ್ಥ್, ಹರಿಣಿ, ಸೂರ್ಯ ಪ್ರವೀಣ್ ಮುಂತಾದವರು ತಾರಾಗಣದಲ್ಲಿದ್ದಾರೆ. ಕಿರಣ್ ಕೃಷ್ಣಮೂರ್ತಿ ಸಂಗೀತ, ನೌಷಾದ್ ಅಲಂ ಛಾಯಾಗ್ರಹಣ ಚಿತ್ರಕ್ಕಿದೆ. ■

# ಕನಸು ಕನಸು ಸೇರಿ 'ಕಣ್ಮಣಿ'

'ಶಿರಸಿಯಿಂದ ಹಲವು ಕನಸುಗಳನ್ನು ಹೊತ್ತು ಬಂದವನು ನಾನು. ನನ್ನ ಕನಸಿಗೆ ಬಲ ತುಂಬಿದವರು ನಿರ್ದೇಶಕ ರಾಮ್ ಪ್ರಸನ್ನ ಹುಣಸೂರು. ನಮ್ಮಿಬ್ಬರ ಕನಸುಗಳು ಸೇರಿ ಈ ಚಿತ್ರ ರೂಪುಗೊಂಡಿದೆ. ಹಾಗಾಗಿ ಈ ಸಿನಿಮಾದ ಗೆಲುವು ನಮ್ಮ ಕನಸುಗಳ ಗೆಲುವೂ ಹೌದು' ಎಂದು ತುಸು ಭಾವುಕರಾಗಿಯೇ ಮಾತಾಡಿದರು ಅರ್ಜುನ್ ನಗರ್ಕರ್.

'ಕಡಲೂರ ಕಣ್ಮಣಿ' ಸಿನಿಮಾದ ಟೀಸರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಅವರ ಮುಖದಲ್ಲಿ ಸಾರ್ಥಕ ಭಾವ ಎದ್ದು ಕಾಣುತ್ತಿತ್ತು. ಹಲವು ಕಾಲದಿಂದ ಕಾಯುತ್ತಿದ್ದ ಗಳಿಗೆಯೊಂದಕ್ಕೆ ಮುಖಾಮುಖಿಯಾದಂತೆ ಅವರು ಪತ್ರಕರ್ತರೊಂದಿಗೆ ಮಾತಿಗಿಳಿದಿದ್ದರು.

'ಕಡಲೂರ ಕಣ್ಮಣಿ ಎಂದರೆ ವಜ್ರ' ಎಂದು ಶೀರ್ಷಿಕೆಯ ಅರ್ಥವನ್ನು ಅರುಹಿದ ನಿರ್ದೇಶಕ ರಾಮ್ ಪ್ರಸನ್ನ, 'ದಸರಾ ಹಬ್ಬಕ್ಕೆ ಚಿತ್ರವನ್ನು ಬಿಡುಗಡೆ ಮಾಡುವ ಆಲೋಚನೆಯಲ್ಲಿದ್ದೇವೆ' ಎಂದೂ ತಿಳಿಸಿದರು.

ನಾಯಕಿ ನಿಶಾ ಯಾಲಿನಿ ಅವರಿಗೆ ಇದು ನಾಯಕಿಯಾಗಿ ಮೊದಲ ಸಿನಿಮಾ. ವಿನೋದ್ ರಾಮ್, ಶೈಲೇಶ್ ಆರ್. ಪೂಜಾರಿ ಹಾಗೂ ಬಸವರಾಜ ಗಜ್ಜಿ ಈ ಚಿತ್ರಕ್ಕೆ ಹಣ ಹೂಡಿದ್ದಾರೆ. ■

